ಶ್ರೀ ಎಂ.ಪಿ. ಕುಮಾರಸ್ವಾಮಿ: ಯಾವುದೇ ಮನೆ ಬಿದ್ದರೂ ಕೂಡಾ 500 ರೂಪಾಯಿಗಳ ಪರಿಹಾರವನ್ನೂ ನೀಡಿಲ್ಲ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಉಪಪ್ರಶ್ನೆಗೆ ಅವಕಾಶವಿಲ್ಲ. ಇದು ಶೂನ್ಯವೇಳೆ.

ವಿಷಯ: ಬಿಸಿಯೂಟ ಯೋಜನೆಯಲ್ಲಿ ಊಟ ಮಾಡಿದ ಶಾಲಾ ಮಕ್ಕಳು ಅಸ್ವಸ್ಥರಾಗಿದ್ದು, ಅದಕ್ಕೆ ಕಾರಣರಾದವರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ

ಶ್ರೀ ಎಂ.ಪಿ. ರೇಣುಕಾಚಾರ್ಯ(ಹೊನ್ನಾಳಿ): ಮಾನ್ಯ ಸಭಾಧ್ಯಕ್ಷರೆ, ನಮ್ಮ ತಾಲೂಕಿನ ಬೇಲಿಮನ್ನೂರಿನಲ್ಲಿ ಕಳೆದ ತಿಂಗಳ 23ರಂದು 200 ಜನ ಮಕ್ಕಳು ಬಿಸಿಯೂಟ ಯೋಜನೆಯಲ್ಲಿ ಮಧ್ಯಾಹ್ನ ಊಟ ಮಾಡಿದ ನಂತರ ಅಸ್ವಸ್ಥರಾಗಿ ಎರಡು ದಿವಸ ಆಸ್ಪತ್ರೆಯಲ್ಲಿದ್ದರು. ಎಸ್.ಎಂ. ಕೃಷ್ಣಾರವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸರ್ಕಾರ ಜಾರಿಗೆ ತಂದಂಥ ಬಿಸಿಯೂಟ ಯೋಜನೆಯನ್ನು ಜಾರಿಗೆ ತರುವ ಮೊದಲು ಸರ್ಕಾರ ಶಾಲೆಗಳಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಟ್ಟು ಜಾರಿಗೆ ತರಬೇಕಾಗಿತ್ತು. ಆದರೆ ಈಗ ಈ ವ್ಯವಸ್ಥೆ ಅವ್ಯವಸ್ಥೆಯಾಗಿದ್ದು, ನಮ್ಮ ತಾಲೂಕಿನಲ್ಲಿ ಸುಮಾರು ಹಳ್ಳಿಗಳಲ್ಲಿ ಈ ಬಿಸಿಯೂಟದ ವ್ಯವಸ್ಥೆಯನ್ನು ನಿಲ್ಲಿಸಬೇಕೆಂದು ಸಾರ್ವಜನಿಕರು ಒತ್ತಡ ತರುತ್ತಿದ್ದಾರೆ. ಇದಕ್ಕೆ ಕಾರಣವೆಂದರೆ, ಊಟಕ್ಕೆ ಒಳ್ಳೆಯ ಅಕ್ಕಿಯನ್ನು ಸಪ್ಲೈ ಮಾಡುತ್ತಿಲ್ಲ. ಸಾಂಬಾರ್ ತಯಾರು ಮಾಡಲು ತರಕಾರಿ ಮತ್ತು ಬೇಳೆಗೆ ಕೇವಲ 20 ಪೈಸೆಯನ್ನು ಮಾತ್ರ ಕೊಡುತ್ತಿದ್ದಾರೆ. ಆದ್ದರಿಂದ ಈ ಒಂದು ಬಿಸಿಯೂಟದ ಯೋಜನೆಯ ಬದಲಾಗಿ ಬೇರೊಂದು ಪರ್ಯಾಯ ವ್ಯವಸ್ಥೆ ಮಾಡಬೇಕು. ಮತ್ತು ಶಾಲಾ ಮಕ್ಕಳು ಅಸ್ವಸ್ಥರಾಗಿದ್ದುದಕ್ಕೆ ಕಾರಣರ್ಯಾರು ಎನ್ನುವುದನ್ನು ಪತ್ತೆ ಹಚ್ಚಿ ಸರ್ಕಾರ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಬಿಸಿಯೂಟದ ಕಾರ್ಯಕ್ರಮದಲ್ಲಿ ಆಹಾರ ಕೆಟ್ಟು ಹೋಗಿ ವಿಷಪೂರಿತವಾಗಿರತಕ್ಕಂಥಾದ್ದು ನಿಜವಾಗಿಯೂ ಕೂಡಾ ವಿಷಾದ ಪಡಬೇಕಾದಂಥ ಸಂಗತಿಯಾಗಿದೆ. ಆದರೆ ಬಿಸಿಯೂಟದ ಈ ಕಾರ್ಯಕ್ರಮ ಬಡ ಮಕ್ಕಳಿಗೆ ಅನುಕೂಲವಾಗಿರುವಂತಹದ್ದು ಮಾನ್ಯ ಶಾಸಕರಿಂದ ಹಿಡಿದು ಪ್ರತಿಯೊಬ್ಬರಿಗೂ ಕೂಡಾ ಮನವರಿಕೆಯಾಗಿದೆ. ಇದೊಂದು ಅತ್ಯಂತ ಉತ್ತಮವಾದ ಕಾರ್ಯಕ್ರಮ ಮತ್ತು ಬಡ ಮಕ್ಕಳು ಶಾಲೆಗೆ ಬರಬೇಕು ಎನ್ನುವ ರೀತಿಯಲ್ಲಿ ಉತ್ತೇಜನ ನೀಡುವ ಹಾಗೂ ಪೌಷ್ಟಿಕ ಆಹಾರ ಕೊಡತಕ್ಕಂಥ ಒಂದು ಒಳ್ಳೆಯ ಕಾರ್ಯಕ್ರಮ. ಸದಸ್ಯರು ಹೇಳಿರುವಂತೆ ಅವರ ಕ್ಷೇತ್ರದಲ್ಲಿ ನಡೆದಿರತಕ್ಕಂಥ ಘಟನೆಯ

ಬಗ್ಗೆ ಆ ತಾಲೂಕಿನಲ್ಲಿ ತನಿಖೆಯನ್ನು ನಡೆಸತಕ್ಕಂತದ್ದು ಆಗುತ್ತದೆ. ಬಿಸಿಯೂಟದ ಬದಲು ಬೇರೆ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ತಾವು ಹೇಳಿದ್ದೀರಿ. ಅಂಥ ಪರ್ಯಾಯ ವ್ಯವಸ್ಥೆ ಮಾಡುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ. ಆದರೆ, ಸೂಕ್ತವಾದಂಥ, ನೈರ್ಮಲ್ಯವಿರುವಂಥ ಪ್ರದೇಶದಲ್ಲಿ ಒಳ್ಳೆಯ ಆಹಾರವನ್ನು ಕೊಡಬೇಕು ಎನ್ನುವ ತಮ್ಮ ಕಳಕಳಿಗೆ ಸರ್ಕಾರದ ಸಂಪೂರ್ಣ ಸಹಮತವಿದೆ. ಇದರ ಬಗ್ಗೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

(ಈ ಹಂತದಲ್ಲಿ ಸದಸ್ಯರಾದ ಸಿ.ಟಿ. ರವಿ, ರೇವುನಾಯಕ್ ಬೆಳಮಗಿ ಇವರು ಅವಕಾಶ ಕೋರಿ ಎದ್ದು ನಿಂತಿದ್ದರು)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಯಾರನ್ನು ಕೂಗುತ್ತೇನೆ, ಅವರು ಪ್ರಸ್ತಾಪ ಮಾಡಬೇಕು. ಶೂನ್ಯವೇಳೆಯಲ್ಲಿ ಇವತ್ತು ಬಹಳ ಜನ ಸದಸ್ಯರಿಗೆ ಅವಕಾಶ ಕೊಟ್ಟಿದ್ದೇನೆ. ನಾಳೆ ಇನ್ನೂ ಸ್ವಲ್ಪ ಜನರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಸಿ.ಟಿ. ರವಿ: 48 ಗಂಟೆಯಿಂದ ಅಲ್ಲಿ ಧರಣಿ ಕುಳಿತಿದ್ದಾರೆ.

ಅಧ್ಯಕ್ಷರು: ನಾನು ಹೇಳುವುದೆನೆಂದರೆ ಇಂದು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೋರಿ ಬಹಳ ಜನ ನೋಟೀಸ್ ಕೊಟ್ಟಿದ್ದರು. ಅದರಲ್ಲಿ ಸ್ವಲ್ಪ ಜನರನ್ನು ಈಗ ಕರೆದಿದ್ದೇನೆ. ಸ್ವಲ್ಪ ಜನರನ್ನು ನಾಳೆ ಕರೆಯುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಸಿ.ಟಿ.ರವಿಯವರಿಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು: ಆಯಿತು, ಎಲ್ಲರೂ ಕುಳಿತುಕೊಳ್ಳಿ

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೇ, ಅಲ್ಲಿ 48 ಗಂಟೆಯಿಂದ ಧರಣಿ ಕುಳಿತಿದ್ದಾರೆ.

ಅಧ್ಯಕ್ಷರು: ಆಯಿತು, ಇವತ್ತು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಈಗ ಶಿವಾನಂದ ಎಸ್. ಪಾಟೀಲ್‌ರವರು

(ಈ ಸಮಯದಲ್ಲಿ ಸದಸ್ಯರಾದ ಎಂ. ನಾರಾಯಣಸ್ವಾಮಿಯವರು ಸದನದಲ್ಲಿ ಉಪಸ್ಥಿತರಿರಲಿಲ್ಲ)

(ಈ ಹಂತದಲ್ಲಿ ಸದಸ್ಯರಾದ ಆರ್. ಧೃವನಾರಾಯಣ್‌ರವರು ಅವಕಾಶ ಕೋರಿ ಎದ್ದು ನಿಂತರು)

ಅಧ್ಯಕ್ಷರು: ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ. ಆಗಲೇ ನಿಮ್ಮನ್ನು ಕರೆದೆ,